ಡಾ: ಹೆಚ್.ಸಿ. ಮಹದೇವಪ್ಪ : ಯಾರ್ಯಾರು red light ಉಪಯೋಗಿಸಬಹುದು ಅದನ್ನು ಕೂಡ ಸೇರಿಸಬೇಕು.

ಅಧ್ಯಕ್ಷರು : ಯಾರ್ಯಾರು ಕೆಂಪು ದೀಪ ಉಪಯೋಗಿಸಬಹುದು ಅದನ್ನು ಸಹ ಶಿಷ್ಟಾಚಾರದ ಅಡಿಯಲ್ಲಿ ಯಾರ್ಯಾರಿಗೆ ಈ red light ಉಪಯೋಗಿಸುವುದಕ್ಕೆ ಅವಕಾಶವಿದೆ ಎಂಬುದನ್ನೂ ಸೇರಿಸಬೇಕೆಂದು ಹೇಳಿ ಸದ್ಯಕ್ಕೆ ಹಕ್ಕುಚ್ಯುತಿಯಿಂದ ಇದನ್ನು ಕೈಬಿಟ್ಟಿದ್ದೇನೆ.

ಶ್ರೀ ಎನ್. ಸಂಪಂಗಿ : Red light ಒಂದೇ ಅಲ್ಲ, ಕೇಸರಿ ಲೈಟ್, green light ಈ ತರಹದ್ದು ಸಹ ಬರುತ್ತಿದೆ.

7. ಅಧ್ಯಕ್ಷರ ಅಪ್ಪಣೆ ಮೇರೆಗೆ (ಮುಂದು):

ಅ) ವಿಷಯ: ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ಜಾಸ್ತಿಯಾಗಿರುವ ಬಗ್ಗೆ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿಪುರಂ) : ಮಾನ್ಯ ಅಧ್ಯಕ್ಷರೆ, ನಾನು ಇಂದು ಬೆಳಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಡಬೇಕೆಂದು ಕೇಳಿದ್ದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಇಂದು ಬೆಳಿಗ್ಗೆ ಸಭೆ ಕರೆದಿದ್ದರು. ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಹಾಹಾಕಾರ ಜಾಸ್ತಿಯಾಗಿರುವ ಹಿನ್ನೆಲೆಯಲ್ಲಿ ನಾನು ಮಾನ್ಯ ಜಲಮಂಡಳಿ ಸಚಿವರಿಗೆ ವಿನಂತಿ ಮಾಡುತ್ತೇನೆ. ಬಹುತೇಕ ನಮ್ಮ ತಿಪ್ಪಗೊಂಡನಹಳ್ಳಿಯ ಭಾಗದಲ್ಲಿ ನೀರು ಸರಬರಾಜು ಏನಾಗುತ್ತಿತ್ತು, ಆ ಪ್ರದೇಶಗಳಿಗೆ ಈಗ ಬಹಳ ತೊಂದರೆಯಾಗಿದೆ. ಹೊಸ ಪ್ರದೇಶಗಳು ಸೇರ್ಪಡೆಯಾದಮೇಲೆ ಹಳೆಯ ಪ್ರದೇಶಗಳು ಕಡೆಗಣಿಸಲ್ಪಟ್ಟಿವೆ ಮತ್ತು ಕೊಳವೆ ಬಾವಿಗಳು ಸಮಯಕ್ಕೆ ಸರಿಯಾಗಿ ದುರಸ್ತಿಯಾಗುತ್ತಿಲ್ಲ. ಇದಕ್ಕೆ ಕಾರಣ ಕೇಳಿದಾಗಲೆಲ್ಲ ಜಲಮಂಡಳಿಯವರು ವಿದ್ಯುಚ್ಛಕ್ತಿ ಇಲಾಖೆಯ ಮೇಲೆ ಹೇಳುತ್ತಾರೆ. ವಿದ್ಯುಚ್ಛಕ್ತಿ ಮತ್ತು ಜಲಮಂಡಳಿಯವರು ಜೊತೆ ಜೊತೆಯಾಗಿ ಸಂಯೋಜನೆ ಇಲ್ಲದೆ ಬೆಂಗಳೂರು ನಗರದಲ್ಲಿ ಇರತಕ್ಕಂಥ ನೀರು ಸಹ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲ. ಪ್ರತಿನಿತ್ಯ ಬೆಂಗಳೂರಿನ ಶಾಸಕರು ತಮ್ಮ ತಮ್ಮ ಕ್ಷೇತ್ರ ಪರ್ಯಟನೆಗೆ ಹೋದಾಗ ಈ ಆಪಾದನೆಗೆ, ಪರೀಕ್ಷೆಗೆ ಮತ್ತು ಜನರ ಸಿಟ್ಟಿಗೆ ಗುರಿಯಾಗುತ್ತಿದ್ದಾರೆ. ಅದಕ್ಕೆ ದೂರದೃಷ್ಟಿಯ ಕಾರ್ಯಕ್ರಮಗಳೇನು? Short

term emergency measure ಏನು? Long term programe ಏನು ಹಮ್ಮಿಕೊಂಡಿದ್ದಾರೆಂದು ದಯಮಾಡಿ ಸರ್ಕಾರ ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರು, ಇವತ್ತು ಬೆಳಿಗ್ಗೆ ಸಂಬಂಧಪಟ್ಟ ಸಚಿವರು ಬೆಂಗಳೂರು ಶಾಸಕರ ಒಂದು ಸಭೆ ಕರೆದಿದ್ದರು. ಅಲ್ಲಿ ನರೇಂದ್ರಬಾಬುರವರು ಸಹ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ಸಚಿವರು ಆ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ಸೂಚನೆ ಕೊಟ್ಟಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲಿ spare pumps, spare motors ಇಡಬೇಕು, replace ಮಾಡಬೇಕೆಂದು ಹೇಳಿದ್ದಾರೆ. ಅವರ ಬಹುತೇಕ ಪ್ರಶ್ನೆಗಳಿಗೆ ಇವತ್ತು ಬೆಳಿಗ್ಗೆ ಉತ್ತರ ಸಿಕ್ಕಿದೆ. ಯಾವುದೇ ರೀತಿಯಿಂದ ಬೇಸಿಗೆ ಕಾಲದಲ್ಲಿ ತಿಪ್ಪಗೊಂಡನಹಳ್ಳಿ belt ನಲ್ಲಿರುವ ಜಾಗದಲ್ಲಿ, ಬೇರೆ ಜಾಗಗಳಲ್ಲಿ ಕೂಡ bore well repair ಗೆ ಜಾಸ್ತಿ ದಿವಸ ತೆಗೆದುಕೊಳ್ಳದೆ ಶೀಘ್ರದಲ್ಲಿ ರಿಪೇರಿ ಮಾಡಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಆ) ವಿಷಯ: ಬಿಡದಿ ಬಳಿ ಇರುವ ಶ್ರೀ ನಿತ್ಯಾನಂದ ಸ್ವಾಮೀಜಿ ಆಶ್ರಮದಲ್ಲಿ ನಡೆಯುತ್ತಿರುವ ಗಲಭೆ ಬಗ್ಗೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬಿಡದಿಯಲ್ಲಿ ಶ್ರೀ ನಿತ್ಯಾನಂದ ಸ್ವಾಮೀಜಿಯವರ ಒಂದು ಆಶ್ರಮವಿದೆ. ಈ ಆಶ್ರಮದಲ್ಲಿ ನಡೆಯತಕ್ಕ ಅಶ್ಲೀಲ ದೃಶ್ಯಗಳನ್ನು ಮಾಧ್ಯಮದಲ್ಲಿ ಬಿತ್ತರಿಸಿದ್ದಾರೆ. ಅದಾದನಂತರ ಸಾರ್ವಜನಿಕರು ಅಲ್ಲಿಯ ಆಶ್ರಮಕ್ಕೆ ನುಗ್ಗಿ ಗಲಾಟೆ ಮಾಡುತ್ತಿದ್ದಾರೆ ಮತ್ತು ಬಿಡದಿಯಲ್ಲಿ ರಸ್ತೆ ತಡೆ ಕೂಡ ಮಾಡಿದ್ದಾರೆ. ಬಹುಶ: ಒಂದು ತಿಂಗಳ ಹಿಂದೆ ಮುಖ್ಯಮಂತ್ರಿಯವರಿಗೆ ಆ ಆಶ್ರಮಕ್ಕೆ ಬರಲು ಆ ಸ್ವಾಮೀಜಿಯವರು ಆಹ್ವಾನ ಕೊಟ್ಟಿದ್ದರು. ಬಹುಶ: ಅವರಿಗೆ 2 ಕೋಟಿ ರೂ. ಬಂಪರ್ ಲಾಟರಿ ಸಿಗಬಹುದೇನೋ ಎಂದು ನಾನು ಅಂದುಕೊಂಡಿದ್ದೆ. ಆದರೆ, ಮುಖ್ಯಮಂತ್ರಿಯವರು ಆ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ. ಈ ಸ್ವಾಮೀಜಿಗಳು ಸ್ವಾಮೀಜಿ ಹೆಸರಿನಲ್ಲಿ ಇಂಥ ಕೆಲಸಗಳನ್ನು ಮಾಡಲಿಕ್ಕೆ ಏನು